(ಅನುಬಂಧ –೬ ಮತ್ತು ಅನುಬಂಧ – ೭)

೨ ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಚಾರಗಳು

ಅ) ಕಬ್ಬು ಬೆಳೆಗಾರರಿಗೆ ಸೂಕ್ತ ಬೆಲೆ ಇಲ್ಲದೇ ತೊಂದರೆಯಾಗುತ್ತಿರುವ ಬಗ್ಗೆ

ಶ್ರೀ ಜೆ ವಿ ಶ್ರೀರಾಮರೆಡ್ಡಿ (ಬಾಗೇಪಲ್ಲಿ) ಇಡೀ ರಾಜ್ಯದಲ್ಲಿರತಕ್ಕಂಥ ಕಬ್ಬು ಬೆಳೆಗಾರರು ಕಬ್ಬಿಗೆ ಬೆಲೆ ಇಲ್ಲ, ರೈತರು ಸಂಪೂರ್ಣವಾಗಿ ದಿವಾಳಿಯಾಗುತ್ತಿದ್ದಾಖುಎ ಅವರಿಗೆ ಇವತ್ತು ಸರ್ಕಾರ, ಸಕ್ಕರೆ ಕಾರ್ಖಾನೆ ಮಾಲೀಕರು ೧೧೦೦–೦೦ ರೂ ಗಳು ಇದ್ದಂಥ ಟನ್ ಕಬ್ಬನ್ನು ಕೇವಲ ೬೦೦–೦೦ ಮತ್ತು ೭೦೦–೦೦ ರೂ ಗಳಿಗೆ ಮಾರಾಟ ಮಾಡತಕ್ಕಂಥ ಸ್ಥಿತಿ ಬಂದಿದೆ, ಆ ಪರಿಸ್ಥಿತಿಯನ್ನು ಈ ಸಕ್ಕರೆ ಕಾರ್ಖಾನೆ ಮಾಲೀಕರು ನಿರ್ಮಾಣ ಮಾಡಿದ್ದಾರೆ ಸರ್ಕಾರ ಇದರ ಮಧ್ಯೆ ಪ್ರವೇಶ ಮಾಡಬೇಕಾಗುತ್ತದೆ, ಏಕೆಂದರೆ ಒಟ್ಟು ೨೦೦ ಲಕ್ಷ ಟನ್ ಕಬ್ಬು ಕರ್ನಾಟಕದಲ್ಲಿ ಬೆಳೆದಿದ್ದಾರೆ ಈಗಾಗಲೇ ೧೪೦ ಸಾವಿರ ಟನ್ ನಷ್ಟು ಕಬ್ಬನ್ನು ಅರೆದಿದ್ದಾರೆ ಇನ್ನು ೬೦೦ ಲಕ್ಷ ಟನ್ ಕಬ್ಬನ್ನು ಅರೆಯಬೇಕಾಗುತ್ತದೆ ಈಗ ಸಕ್ಕರೆ ಕಾರ್ಖಾನೆ ಮಾಲೀಕರು ಏನು ಮಾಡಿದ್ದಾರೆ ೬೦೦, ೭೦೦–೦೦ ರೂ ಗಳಿಗೆ ಖರೀದಿಸುವ ಸ್ಥಿತಿಗೆ ಬಂದು ಕೆಲವು ರೈತರು ಅದನ್ನು ಗದ್ದೆಯಲ್ಲಿಯೇ ಬಿಟ್ಟುಬಿಟ್ಟಿದ್ದಾರೆ, ಏಕೆಂದರೆ ಅದನ್ನು ಕಡಿದರೆ ಸಕ್ಕರೆ ಕಾರ್ಖಾನೆ ಮಾಲೀಕರು ಅದನ್ನು ತೆಗೆದುಕೊಳ್ಳುತ್ತಿಲ್ಲ, ರೈತರು ಅದನ್ನು ಕಡಿದು ಆಲೆಮನೆ ಮಾಡಲಿಕ್ಕೆ ಹೋದರೆ ಅದಕ್ಕೆ ಕೂಲಿ ಬರುವುದಿಲ್ಲ ಹಾಗೇ ತೋಟದಲ್ಲಿ ಬಿಟ್ಟುಬಿಟ್ಟಿದ್ದಾರೆ ತುಂಬಾ ಲೇಟಾದರೆ ಆ ಕಬ್ಬಿನಲ್ಲಿ ಸಕ್ಕರೆ ಅಂಶ ಕಡಿಮೆಯಾಗುತ್ತದೆ, ರಿಕವರಿ ಲೆಸ್ ಆಗಿ ಸಂಪೂರ್ಣವಾಗಿ ನಾಶವಾಗುತ್ತದೆ, ರೈತ ಸಂರ್ಪೂವಾಗಿ ದಿವಾಳಿಯಾಗುತ್ತಾನೆ ಅದರ ಪ್ರಯುಕ್ತ ಮೈಸೂರು, ಮಂಡ್ಯ ಜಿಲ್ಲೆಗಳ ಕಡಿಯಿಂದ ನೂರಾರು ಜನ ರೈತರು ಬೆಲೆ ನಿರ್ಣಯ ಮಾಡಿ ಎಂದು ಧರಣಿ ಕುಳಿತಿದ್ದಾರೆ, ಅವರು ೧೩ ಬೇಡಿಕೆಗಳನ್ನು

ಸರ್ಕಾರಕ್ಕೆ ಕೊಟ್ಟಿದ್ದಾರೆ ನಾನು ಅವೆಲ್ಲವನ್ನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ ನಾವು ಈಗ ತಮ್ಮ ಮೂಲಕ ಸರ್ಕಾರಕ್ಕೆ demand ಮಾಡುತ್ತಿರುವುದೇನೆಂದರೆ immediate ಆಗಿ ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು, ಕಬ್ಬು ಬೆಳೆಗಾರರ ರಕ್ಷಣೆಗೆ ಬರಬೇಕು ಮತ್ತು ಕಬ್ಬನ್ನು ಸರ್ಕಾರ ಖರೀದಿ ಮಾಡಬೇಕು, ಮತ್ತೆ ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕರೆದು ಅವರೊಂದಿಗೆ ಚರ್ಚೆಮಾಡಿ ಮಾಲೀಕರಿಗೆ ಹೇಳಬೇಕು , ರೈತರ ರಕ್ಷಣೆಗೆ ಬರಬೇಕು, ಸರ್ಕಾರ ಮಧ್ಯೆ ಪ್ರವೇಶ ಮಾಡಬೇಕು, ಮತ್ತೆ ಸಕ್ಕರೆ ಕಾರ್ಖಾನೆಯ ಮಾಲೀಕರನ್ನು ಕರೆದು ಅವರೊಂದಿಗೆ ಚರ್ಚೆಮಾಡಿ ಮಾಲೀಕರಿಗೆ ಹೇಳಬೇಕು , ರೈತರ ರಕ್ಷಣೆಗೆ ಬರಬೇಕು, ಸರ್ಕಾರ ಮಧ್ಯೆಪ್ರವೇಶ ಮಾಡಬೇಕು ಇದು ಬಹಳ ಗಂಭೀರವಾದಂಥ ವಿಚಾರವಾಗಿದೆ ಇಡೀ ಕಬ್ಬು ಬೆಳೆಗಾರರು ಕರ್ನಾಟಕ ರಾಜ್ಯದಲ್ಲಿ ದಿವಾಳಿಯಾಗತಕ್ಕಂಥ ಸ್ಥಿತಿಗೆ ಬಂದಿದ್ದಾರೆ ಆದ್ದರಿಂದ ಸರ್ಕಾರ ಮಧ್ಯೆ ಪ್ರವೇಶಿಸಬೇಕು, ರೈತರ ಮುಖಂಡರು, ಸಕ್ಕರೆ ಕಾರ್ಖಾನೆ ಮಾಲೀಕರನ್ನು ಕರೆದು ಚರ್ಚೆ ಮಾಡಿ ಆ ಸಮಸ್ಯೆಗೆ ತಕ್ಷಣ ಪರಿಹಾರ ಹುಡುಕಬೇಕು ಎಂದು ತಮ್ಮ ಮೂಲಕ ನಾನು ಸದನದಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ

ಶ್ರೀ ಕೆ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ನಾವು ಹಲವಾರು ಸಾರಿ ಈ ಕಬ್ಬು ಬೆಳೆಗಾರರ ಬಗ್ಗೆ ಪ್ರಸ್ತಾಪ ಮಾಡಿದ್ದೆವು ಆಗ ಸರ್ಕಾರದಿಂದ ಉತ್ತರ ಬರಲಿಲ್ಲ ಇವತ್ತು ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ರೈತ ಸಂಘದವರು ಅಲ್ಲಿ ಪ್ರತಿಭಟನೆ ಮಾಡುತ್ತಿದ್ದಾರೆ ಸರ್ಕಾರ ಇದರ ಬಗ್ಗೆ ಯಾವುದೇ ಉತ್ತರವನ್ನು ಹೇಳದೆ ಕಬ್ಬು ಬೆಳೆಗಾರರು ಏನು ಮಾಡಬೆಕು ? ಮಾನ್ಯ ರೇವಣ್ಣನವರು ಬೆಳಿಗ್ಗೆ ಹೇಳಿದ್ದರು, ಹಿಂದೆ ಮಾನ್ಯ ದೇವೇಗೌಡರು ಮುಖ್ಯಮಮತ್ರಿಯಾಗಿದ್ದಾಗ ಬೇರೆ ಬೇರೆ ಕಬ್ಬಿನ ಕಾರ್ಖಾನೆಗಳಿಗೆ ಕಬ್ಬನ್ನು ಕಳುಹಿಸುವಂಥ ವ್ಯವಸ್ಥೆಯನ್ನು ಮಾಡಿದ್ದರು, ಅದನ್ನಾದರೂ ಇವರು ಇವತ್ತು ಮಾಡಬಹುದಿತ್ತಲ್ಲ ಇವತ್ತು ಕಾರ್ಖಾನೆಗಳು ಹೊಸದಾಗಿ ಬರುತ್ತಿವೆ, ಆದರೆ ಕಬ್ಬುಗಳು ಹಾಗೆಯೇ ಉಳಿದುಕೊಳ್ಳುತ್ತಿವೆ ಇದ್ಯಾಕೆ ಎಂದು ಗೊತ್ತಾಗುತ್ತಿಲ್ಲ, ಕಾರ್ಖಾನೆ ಮಾಲೀಕರೆಲ್ಲಾ ಸೇರಿಕೊಂಡು ಈ

ಒಂದು ವ್ಯವಸ್ಥೆಯನ್ನು ತಂದಿಡುತ್ತಿದ್ದಾರೆ ಅವರು ಕಡಿಮೆ ಬೆಲೆಗೆ ಕಬ್ಬು ಕೊಡಲಿಕ್ಕೆ ಒತ್ತಡವನ್ನು ತರುವ ಉದ್ದೇಶವಿರಬಹುದು ಅದನ್ನು ತನಿಖೆ ಮಾಡಬೇಕು, ಈ ಕಬ್ಬನ್ನು ಅರೆಯುವ ವ್ಯವಸ್ಥೆಗೆ ಸರ್ಕಾರ ಕೂಡಲೇ ಕ್ರಮ ಕೈಗೊಂಡು ಒಂದು ಬೆಲೆಯನ್ನು ನಿಗದಿಪಡಿಸಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ

ಶ್ರೀ ಶಿವಾನಂದ ಪಾಟೀಲ್ (ತಿಕ್ಕೋಟಾ) ಅಧ್ಯಕ್ಷರೇ ಈ ಸಮಸ್ಯೆ ರಾಜ್ಯಾದ್ಯಂತವಿದದು ವಿಶೇಷವಾಗಿ ಬಿದರೆ ಮತ್ತು ಬಿಜಾಪುರದಲ್ಲಿ ಇದೆ ನಾವು ಪರಿಪರಿಯಾಗಿ ಸರ್ಕಾರಕ್ಕೆ ವಿನಂತಿ ಮಾಡಿಕೊಂಡವು ಸಕ್ಕರೆ ಕಾರ್ಖಾನೆಗಳು ಒಯ್ಯಲಿ, ಒಯ್ಯದಿದ್ದರೆ ಮಹಾರಾಷ್ಟ್ರದವರಿಗಾದರೂ insist ಮಾಡಿ ಒಯ್ಸಿಸಬೇಕಾದ ಪ್ರಯತ್ನ ಮಾಡಬೇಕು ಆದರೆ ಯಾವುದೇ ರೀತಿಯಿಂದ ಸ್ಪಂದಿಸುವಂತಹ ಪ್ರಯತ್ನವೇ ಸರ್ಕಾರದಿಂದ ಆಗುತ್ತಿಲ್ಲ ಈ ಕಡೆ BJPಯವರು ಕೂತಿದ್ದಾಗ ರಗಡು ಇದರ ಬಗ್ಗೆ ಪ್ರಸ್ತಾಪ ಮಾಡಿ ಹೋರಾಟ ಮಾಡಿದರು ಈ ಆಯವ್ಯಯದಲ್ಲಿ ಸಕ್ಕರೆ ಬೆಳೆದವರಿಗೆ ಸಕ್ಕರೆ ಕಾರ್ಖಾನೆಗಳಿಗೆ ಏನಾದರೂ ಸಹಾಯಧನ ಕೊಡಬೇಕು ಅಂತ ಪದೇ ಪದೇ ಹೇಳಿದ್ದರು ಸರ್ಕಾರವೇ ಹೇಳಿಕೊಳ್ಳುತ್ತದೆ ತಾನು ಕೃಷಿಕರ ಕಾರ್ಮಿಕರ ಪರವಿದೆ ಎಂದು ಆದರೆ ಇಂಥ ಒಂದು ಜ್ವಲಂತ ಸಮಸ್ಯೆ ಬಂದಿರುವಾಗ ಒಬ್ಬ ಸಚಿವೂ ಇದಕ್ಕೆ ಸ್ಪಂದಿಸಲು ತಯಾರಿಲ್ಲ ಎಂಬುದು ದುರ್ದೈವದ ಸಂಗತಿ ನಮ್ಮ ಬೆಲೆಯಲ್ಲಿ ಇವತ್ತು ೬ ಲಕ್ಷ ಟನ್ ಕಬ್ಬು ಹಾಗೇ ನಿಂತಿದೆ ಇದಕ್ಕೆ ಉತ್ತರಬೇಕು

ಶ್ರೀ ಬಂಡೆಪ್ಪ ಕಾಶಂಪುರ್ ಅಧ್ಯಕ್ಷರೇ, ಸರ್ಕಾರ ಸ್ಪಂದಿಸುತ್ತಿಲ್ಲವೆಂಬ ಮಾತು ಆಡಿದರು

ಶ್ರಿ J C ಮಾಧುಸ್ವಾಮಿ ಸಂಬಂಧಪಟ್ಟ ಸಚಿವರಿಲ್ಲ, ಇದನ್ನು ೬ಕ್ಕೆ ಪರಿವರ್ತಿಸಿ ಸೋಮವಾರಕ್ಕೆ ಗತೊಂಡುಬಿಡಿ ಸಾರ್ ಮಂಡ್ಯದ ರೈತರು ಬಂದಿದ್ದಾರೆ, ಬೀದರ್ ಗೆ ಉತ್ತರವಾಗ ಬಹುದು

ಶ್ರೀ K R ರಮೇಶ್ ಕುಮಾರ್ ವಿರೋಧ ಪಕ್ಷ ನಾಯಕರು ಕೂಡ ಈ ವಿಷಯಚಲ್ಲಿ ಚರ್ಚೆಯಾಗಬೇಕೆಂದು ನೋಟಿಸ್ ತಮ್ಮ ಕಚೇರಿಗೆ ಕಳಿಸಿದ್ದಾರೆ ಮಾಧುಸ್ವಾಮಿ ಹೇಳಿದಂತೆ ಯಾವುದೇ ರೂಪದಲ್ಲಿ ಚರ್ಚೆಗೆ ತಗೊಂಡರೆ ಎಲ್ಲರೂ ಭಾಗವಹಿಸಲು ಆಗುತ್ತದೆ ದಯಮಾಡಿ ಇದನ್ನು ನಿಯಮ ೬೯ರ ಅಡಿಯಲ್ಲಿ ಅವಕಾಶ ಮಾಡಿಕೊಡಿ

ಉಪಾಧ್ಯಕರಷರು ೬೯ ಕ್ಕೆ ಇನ್ನೂ ನೋಟೀಸ್ ಬಂದಿಲ್ಲ, ನೋಟೀಸ್ ಕಳಿಸಿಕೊಡಿ

ಆ ಬಿದರ್ ಜಿಲ್ಲೆ ಹುಮ್ನಾಬಾದ್ ತಾಲ್ಲೂಕು ಸಿದ್ದಟೈಹಳ್ಳಿ ಗ್ರಾಮದಲ್ಲಿ ರೈತನೊಬ್ಬನು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ

ಶ್ರೀ ಮೀರಾಜುದಿನ್ ಪಟೇಲ್ (ಹುಮ್ನಾಬಾದ್) ಅಧ್ಯಕ್ಷರೇ ಬೀದರ್ ಜಿಲ್ಲೆ ಹುಮ್ನಾಬಾದ್ ನನ್ನ ಕ್ಷೇತ್ರದಾಗೆ ಸಿದ್ದಟ್ನಹಳ್ಳಿ ಗ್ರಾಮದಲ್ಲಿ ೨೨ನೇ ತಾರೀಖು ಶಿವಾನಂದ ವೀರ್ ಶೆಟ್ಟಿ ಗ್ರಾದರ್ ಎಂಬ ರೈತ ಸಮಯಾನುಸಾರ factory ಯವರು ಒಯ್ಯದ ಕಾರಣ ಆತ್ಮಹತ್ಯೆ ಮಾಡಕೊಂಡಿದ್ದಾನೆ ಕರ್ನಾಟಕವಷ್ಟೇ ಅಲ್ಲ ಭಾರತ ದೇಶದಲ್ಲೇ ಇದು ಮೊದಲ ಬಾರಿ ಕಬ್ಬು ಬೆಳೆಗಾರನೊಬ್ಬ ಆತ್ಮಹತ್ಯೆ ಮಾಡಕೊಂಡಿದ್ದು, ರೈತರಿಗೆ ಮೂರು ತಿಂಗಳಾದರೂ ಕಬ್ಬು ಹಾಕಿದ್ದರೆ ಪೇಮೆಂಟ್ ಮಾಡಲಿಲ್ಲ ಅದರ ಬಗ್ಗೆ ಸಕ್ಕರೆ ಸಚಿವರು ಗೃಹಸಚಿವರು ಆಶ್ವಾಸನೆ ಕೊಟ್ಟಿದ್ದರು ೧೫ ದಿವಸದಲ್ಲಿ ಸರಿಪಡಿಸೋಣ ಅಂತ ಈಗ ೩ factory ಗಳಿಗೆ ೪೫ ಕೋಟಿ ಬಿಡುಗಡೆ ಮಾಡಿದ್ದಾರೆ ಅದಕ್ಕಾಗಿ ಮುಖ್ಯಮಂತ್ರಿ ಉಪಮುಖ್ಯಮಂತ್ರಿ ಸಕ್ಕರೆ ಸಚಿವರನ್ನು ನಾನು ಅಭಿನಂದಿಸುತ್ತೇನೆ ಈಗ ನಮ್ಮ incharge minister ಒಂದು statement ಕೊಟ್ಟಿದ್ದಾರೆ ೧೫೦ ಲಕ್ಷ ಟನ್ ಇನ್ನೂ ಉಳಿಯುತ್ತದೆ ಅಂತ ಅದು ಮುಂದಿನ ವರ್ಷ ಒಯ್ಯುತ್ತಾರೆ? ರೈತರು ನೂರು ಟನ್ ಕಬ್ಬು factory ಗೆ ಹಾಕಿದರು ಅಂದರೆ ಕಟಾವ್ ಮಾಡುವವರು ೧೦ ಸಾವಿರ ರೂ ಕೇಳುತ್ತಾರೆ ಲಾರಿಯವರು ೨೦೦ ರೂ ಕೇಳುತ್ತಾರೆ ಈ ರೀತಿ mis management ಆಗಿ ಹಿಂದೆ ಡಿಸೆಂಬರ್ರು ಪೆಂಡಿಂಗ್ ಇಟ್ಟು ಜನವರಿದು ಕಬ್ಬು